


ಎಸ್.ಎಸ್. ಕುಮಾರಿ

*ತಾಯ್ನಾಡಿನ ಜನರ ಬೆವರಿನ ಹಣದಿಂದ ಉನ್ನತ ವಿದ್ಯಾಭ್ಯಾಸ ಪಡೆದು ಹೆಚ್ಚು ಹಣ ಗಳಿಸುವ ದುರಾಸೆಯಿಂದ ವಿದೇಶಕ್ಕೆ ಹೋಗಿ ತಮ್ಮ ಬುದ್ಧಿಯನ್ನು ಒತ್ತೆಯಿಡುವ ಬೌದ್ಧಿಕ ಜೀತದಾಳುಗಳ ಪರದಾಟವನ್ನು ವಿಡಂಬಿಸಿರುವ ಮಾನ್ಯ ಕುಮಾರಿಯವರು ಬೆಂಗಳೂರಿನಲ್ಲಿ ಅಡ್ವೋಕೇಟ್ ಆಗಿರುವರು ಹಾಗೂ ರಾಮಕೃಷ್ಣ ಆಶ್ರಮದ ಭಕ್ತರು .*

ಒಂದು ದಿನ ದಂಪತಿಗಳು ದುಃಖತಪ್ತರಾಗಿ ಆಫೀಸಿನೊಳಗೆ ಅಡಿಯಿಟ್ಟರು. ಆಫೀಸನ್ನು ಮುಗಿಸಿ ಏಳುವುದರಲ್ಲಿದ್ದ ನಾನು ಕುಳಿತುಕೊಳ್ಳಬೇಕಾಯಿತು. ಅವರಿತ್ತ ಕಾಗದಗಳ ಮೇಲೆ ಕಣ್ಣಾಡಿಸಿದೆ. ಶುದ್ಧ ಕ್ರಯ ಪತ್ರ. ಮನೆಯ ಖರ್ಚು ವೆಚ್ಚಗಳಿಗಾಗಿ ಪಡೆದುಕೊಂಡ ಸಾಲದ ಪ್ರತಿಯಾಗಿ ಮನೆಯನ್ನು ಮಾರಿ ಕಾನೂನು ಬದ್ಧವಾಗಿ ನೋಂದಾಯಿಸಲಾಗಿದೆ. ಜೊತೆಗೆ ಇತರರಿಂದ ತೊಂದರೆಯಾಗದಂತೆ ನ್ಯಾಯಾಲಯದಿಂದ ಇನ್‌ಜಂಕ್ಷನ್ (Injunction) ಆಜ್ಞೆಯನ್ನು ಪಡೆದುಕೊಂಡ ನಕಲು. ಕಣ್ಣೀರಿಡುತ್ತಾ ಅವರು ಹೇಳಿದ ಕಥೆಯನ್ನು ಅವರಿಂದಲೇ ಕೇಳಿ.

"ನಾವಿಬ್ಬರೂ ವೈದ್ಯರು. ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಇತ್ತು ಸ್ಟೇಟ್ಸ್‌ಗೆ ಹೋದೆವು. ಇವಳು ನನ್ನ ಸೋದರತ್ತೆಯ ಒಬ್ಬಳೇ ಮಗಳು, ನನ್ನ ಹೆಂಡತಿ. ನಾನು ನಮ್ಮ ತಂದೆಗೆ ಒಬ್ಬನೇ ಮಗ. ಸದಾಶಿವ ನಗರದಲ್ಲಿ ನಮ್ಮ ದೊಡ್ಡ ಬಂಗಲೆ ಇದೆ. ಇವಳಿಗೆ ತಂದೆಯ ಜಮೀನು ಮಂಡ್ಯ ಜಿಲ್ಲೆಯಲ್ಲಿದೆ. ನನಗೆ ತಾಯ್ತಂದೆಗಳಿಬ್ಬರೂ ಇಲ್ಲ. ಇವಳಿಗೆ ತಾಯಿ ಮಾತ್ರ ಇದ್ದರು. ಇವರ ತಾಯಿಗೆ ಬಿ.ಡಿ.ಎ ನಿಂದ ಅಲಾಟ್ ಆದ ಒಂದು ದೊಡ್ಡ ಸೈಟಿನಲ್ಲಿ ಮನೆಕಟ್ಟಿಸಿ, ನಮ್ಮ ಒಬ್ಬಳೇ ಮಗಳನ್ನು ಅವರೊಟ್ಟಿಗೇ ಬಿಟ್ಟು, ನಾವಿಬ್ಬರೂ ಹಣ ಮಾಡುವ ಉದ್ದೇಶದಿಂದ ಸ್ಟೇಟ್ಸ್‌ಗೆ ಹೋದೆವು. ಅಲ್ಲಿ ಕಂಪನಿಯ ನಿಯಮದ ಪ್ರಕಾರ ನಾವು ಅರ್ಧದಲ್ಲಿ ಬಿಟ್ಟು ಬರುವಹಾಗಿಲ್ಲ. ಆದುದರಿಂದ ನಾವು ಒಂದು ಬಾರಿ ಮಾತ್ರ ಬೆಂಗಳೂರಿಗೆ ಬರಲು ಸಾಧ್ಯವಾಯಿತು.

"ನರ್ಸರಿಗೆ ಹೋಗುತ್ತಿದ್ದ ನಮ್ಮ ಪುಟ್ಟ ಮಗಳನ್ನು ಇವಳ ತಾಯಿ ನೋಡಿಕೊಂಡು ಅವರ ಮನೆಯಲ್ಲಿಯೇ ಇದ್ದರು. ಸದಾಶಿವನಗರದ ಮನೆವಾಡಿಗೆ ಹಾಗೂ ಜಮೀನಿನ ಕಾಳುಕಡ್ಡಿಗಳು ಇವರಿಗೆ ಸರಿಯಾಗಿ ತಲುಪುವಂತೆ ವ್ಯವಸ್ಥೆ ಮಾಡಿದ್ದೆವು. ಮೇಲಿಂದ ಮೇಲೆ ಫೋನ್ ಮುಖಾಂತರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದೆವು. ಇವರಿದ್ದ ಮನೆಯ ಕರೆಂಟು ನೀರು ಫೋನ್ ಕಂದಾಯ ಇತ್ಯಾದಿಗಳ ಬಿಲ್ಲುಗಳನ್ನು ಕಟ್ಟಲು ಪಕ್ಕದ ಸರ್ವಿಸ್ ಎಂಟರ್ ಪ್ರೈಸಸ್‌ರವರಿಗೆ ಹೇಳಿ ವ್ಯವಸ್ಥೆ ಮಾಡಿದ್ದೆವು. ಇವರ ಸಹಾಯಕ್ಕೆಂದು ಒಬ್ಬ ಹೆಣ್ಣು ಹುಡುಗಿ ಮನೆ ಕೆಲಸವನ್ನು ನೋಡಿಕೊಳ್ಳುತ್ತಿದ್ದಳು. ಹೋದ ತಿಂಗಳು ನಮ್ಮ ಅತ್ತೆ ಹಾಗೂ ಮಗಳ ಕೊಲೆ ಸುದ್ದಿಯನ್ನು ಕೇಳಿ ಇಲ್ಲಿ ಬಂದು ನೋಡಿದರೆ ಕೆಲಸದ ಹುಡುಗಿ ಹಾಗೂ ಎಂಟರ್ ಪ್ರೈಸಸ್‌ನವನು ಕೂಡಿ ಈ ಕೆಲಸ ಮಾಡಿದ್ದಾರೆ ಎಂದು ತಿಳಿಯಿತು. ಈಗೇನು ಮಾಡುವುದು?" ಎಂದು ಅಳಲು ಪ್ರಾರಂಭಿಸಿದರು.

"ಎದ್ದುಹೋಗಿ ನೇಣು ಹಾಕಿಕೊಳ್ಳಿ" ಎಂದು ಹೇಳಬೇಕೆನಿಸಿದರೂ ತಡೆದುಕೊಂಡು, "ನಮ್ಮ ದೇಶದಲ್ಲಿ ಶಾರೀರಿಕ ಜೀತಪದ್ಧತಿ ನಿರ್ಮೂಲನಾ ಕಾಯ್ದೆ ಜಾರಿಯಲ್ಲಿದೆ. ಬೌದ್ಧಿಕ ಜೀತಪದ್ಧತಿ ನಿರ್ಮೂಲನಾ ಕಾಯಿದೆ ಜಾರಿಯಲ್ಲಿಲ್ಲ" ಎಂದೆ. "ಹಾಗೆಂದರೆ?" ಎಂದರು ಅರ್ಥವಾಗದೆ.

"ಉಪಯೋಗಿಸದೆ ಜೇನುನೊಣದಂತೆ ಕೂಡಿಡುವ ಬರಿ ಹಣ ಗಳಿಕೆಯೆ ಜೀವನದ ಉದ್ದೇಶವಾಗಿದ್ದರೆ, ಯಾವುದಾದರೂ ಬ್ಯಾಂಕುಗಳಲ್ಲಿ ಕ್ಯಾಷಿಯರ್ ಕೆಲಸ ಮಾಡಿ ಹಗಲಿರುಳು ಹಣ ಎಣಿಸಬಹುದಿತ್ತು. ಅದಕ್ಕೆ ವೈದ್ಯಪರೀಕ್ಷೆ ಪಾಸುಮಾಡಿ ವಿದೇಶಕ್ಕೆ ಹೋಗುವ ಅಗತ್ಯವೇನಿತ್ತು? ಜನನೀ, ಜನ್ಮಭೂಮಿಗಳ ಜೊತೆಗೆ ಜೀವನದ ಬೆಳಕು ಕುಡಿಯನ್ನೂ ನೀವು ಕಳೆದುಕೊಂಡು ಅತೋಭ್ರಷ್ಟ ತತೋಭ್ರಷ್ಟರಾಗಿದ್ದೀರಿ, ಅತೀ–ಆಸೆ ಗತಿ ಕೆಡಿಸಿತು. ನಿಮ್ಮ ಗಳಿಕೆಯನ್ನು ಅನುಭವಿಸುವವರೇ ಇಲ್ಲದ ಮೇಲೆ ಆ ಗಳಿಕೆ ಯಾವ ಪ್ರಯೋಜನಕ್ಕೆ?" ಎಂದೆ.

**ಅತಿದಾನಾತ್ ಬಲಿರ್ಬದ್ಧೋ ಹ್ಯತಿಮಾನಾತ್ ಸುಯೋಧನಃ ।**
**ವಿನಷ್ಟೋ ರಾವಣೋ ಲೌಲ್ಯಾದತಿ ಸರ್ವತ್ರ ವರ್ಜಯೇತ್ ॥**

"ಅತಿ ದಾನದಿಂದ ಬಲಿಯು ಬಂದಿಯಾದನು, ಅತಿ ಅಭಿಮಾನದಿಂದ ಸುಯೋಧನನು ಹತನಾದನು ಮತ್ತು ರಾವಣನು ಅತಿಭೋಗದಿಂದ ನಾಶಹೊಂದಿದನು. ಆದ್ದರಿಂದ ಎಲ್ಲ ವಿಷಯದಲ್ಲಿಯೂ ಅತಿಯನ್ನು ಬಿಡಬೇಕು."

ಹಣಕ್ಕಿಂತ ಮುಖ್ಯವಾದುದು ಮಾನವೀಯ ಸಂಬಂಧವೆಂಬುದನ್ನು ಇಂದಿನ ಯುವಕರು ಅರಿಯಬೇಕಾಗಿದೆ. ವಿದ್ಯಾಭ್ಯಾಸ ನಮ್ಮನ್ನು ಉತ್ತಮ ಮಾನವರನ್ನಾಗಿ ಮಾಡಬೇಕೇ ಹೊರತು, ಉತ್ತಮ ಹಣಸಂಪಾದಕರನ್ನಾಗಿ ಅಲ್ಲ. ಮಾನವೀಯ ಸಂಬಂಧವನ್ನು ಕಡೆಗಣಿಸಿ ನಾವು ಧನಪಿಶಾಚಿಗಳಾದರೆ ನೆಮ್ಮದಿಯ ಬಾಳಿನಿಂದ ನಾವು ವಂಚಿತರಾಗುತ್ತೇವೆ. ನೆಮ್ಮದಿಗಾಗಿಯೇ ನಾವು ಹಣವನ್ನು ಅರಸುತ್ತ ನಾವು ನೆಮ್ಮದಿಯನ್ನು ಕಳೆದುಕೊಳ್ಳುತ್ತಿರುವುದು ಅಚ್ಚರಿಯ ಸಂಗತಿ. ಹಣದ ಮೌಲ್ಯವನ್ನು ಈ ಕೆಳಗಿನ ಆಂಗ್ಲ ಹೇಳಿಕೆ ಸುಂದರವಾಗಿ ಚಿತ್ರಿಸುತ್ತದೆ: "ಹಣದಿಂದ ಹಾಸಿಗೆಯನ್ನು ಕೊಂಡುಕೊಳ್ಳಬಹುದು, ಆದರೆ ನಿದ್ದೆಯನ್ನಲ್ಲ; ಹಣದಿಂದ ಆಹಾರವನ್ನು ಕೊಂಡುಕೊಳ್ಳಬಹುದು, ಆದರೆ ಬಾಯ್ರುಚಿಯನ್ನಲ್ಲ; ಹಣದಿಂದ ಔಷಧಿ ಕೊಂಡುಕೊಳ್ಳಬಹುದು, ಆದರೆ ಆರೋಗ್ಯವನ್ನಲ್ಲ; ಹಣದಿಂದ ಪುಸ್ತಕಗಳನ್ನು ಕೊಂಡುಕೊಳ್ಳಬಹುದು, ಆದರೆ ಜ್ಞಾನವನ್ನಲ್ಲ; ಹಣದಿಂದ ಮನರಂಜನೆಯನ್ನು ಪಡೆಯಬಹುದು, ಆದರೆ ಸುಖವನ್ನಲ್ಲ; ಹಣದಿಂದ ಸೌಂದರ್ಯವಸ್ತುಗಳನ್ನು ಕೊಂಡುಕೊಳ್ಳಬಹುದು, ಆದರೆ ಸೌಂದರ್ಯವನ್ನಲ್ಲ; ಹಣದಿಂದ ಮನೆ ಕೊಂಡುಕೊಳ್ಳಬಹುದು, ಆದರೆ ಸುಖೀ ಕುಟುಂಬವನ್ನಲ್ಲ." ನಮಗೆ ಹಣ ಆವಶ್ಯಕ ನಿಜ, ಆದರೆ ಅದರ ಮಿತಿಯನ್ನು ಅರಿತು, ನೆಮ್ಮದಿಯ, ಸಾರ್ಥಕ ಮತ್ತು ಮೌಲ್ಯವಂತ ಜೀವನದ ಕಡೆ ನಮ್ಮ ಗಮನವನ್ನು ಹರಿಸಬೇಕು. ❖